**ಒ ಎಸ್ .ಸಂಖ್ಯೆಃ 805/2024**

**ಡಿ ಡಬ್ಲ್ಯೂಃ 1**

**ದಿನಾಂಕಃ 30.04.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ವಕೀಲರಾದ ಶ್ರೀ ಬಿ ಟಿ ಎನ್ ಅವರಿಂದಃ**

1. ಈ ದಾವೆಯನ್ನು ಆಕಾಶ ಎನ್ನುವರು ಹಾಕಿರುತ್ತಾರೆ. ವಾದಿ 1 ನೇ ತರಗತಿಯಿಂದ 7 ನೇ ತರಗತಿಯವರೆಗೆ ನಮ್ಮ ಶಾಲೆಯಲ್ಲಿ ಓದಿರುತ್ತಾರೆ. ವಾದಿಯನ್ನು 1 ನೇ ತರಗತಿಗೆ ನೋಂದಣಿ ಮಾಡಿಕೊಂಡಾಗ ಆಕಾಶ ತಾಯಿ ನಾಗಮ್ಮ ಮಾದರ ಎಂದು ನೋಂದಣಿ ಮಾಡಿಕೊಂಡಿದ್ದೇವು. ವಾದಿಯ ವರ್ಗಾವಣೆ ಪ್ರಮಾಣ ಪತ್ರದಲ್ಲಿ ಏನೆಂದು ನಮೂದು ಮಾಡಿ ಕೊಟ್ಟಿದ್ದಿರಿ ಎಂದರೆ ಸಾಕ್ಷಿಯು ವರ್ಗಾವಣೆ ಪ್ರಮಾಣ ಪತ್ರ ಸಿಕ್ಕಿಲ್ಲ ಎಂದು ನುಡಿಯುತ್ತಾರೆ. ವಾದಿಯ ವರ್ಗಾವಣೆ ಪ್ರಮಾಣ ಪತ್ರ ನೀಡುವಾಗ ವಾದಿಯ ತಂದೆಯ ಹೆಸರನ್ನು ಪ್ರಾಣೇಶ ಎಂದು ನಾವೇ ನಮೂದು ಮಾಡಿ ಕೊಟ್ಟಿದ್ದೇವೆ ಎಂದರೆ ಸಾಕ್ಷಿಯು ಆ ಸಮಯದಲ್ಲಿ ನಾನು ಮುಖ್ಯೋಪಾಧ್ಯಯ ಇರಲಿಲ್ಲ ಎಂದು ನುಡಿಯುತ್ತಾರೆ. ವಾದಿಯ ತಾಯಿ ದೇವದಾಸಿ ಎಂದು ಗೊತ್ತಿದ್ದರೂ ಸಹ ನಾವು ವಾದಿಯ ತಂದೆಯ ಹೆಸರು ಪ್ರಾಣೇಶ ಎಂದು ನಮೂದು ಮಾಡಿಕೊಟ್ಟಿರುತ್ತೇವೆ ಎಂದರೆ ಸಾಕ್ಷಿಯು ವಾದಿ ಶಾಲೆಗೆ ಸೇರಿದಾಗಿನಿಂದ ಆತ ವರ್ಗಾವಣೆ ಆದ ಸಮಯದಲ್ಲಿ ನಾನು ಇರಲಿಲ್ಲ. ವಾದಿಯ ತಂದೆಯ ಹೆಸರು ಪ್ರಾಣೇಶ ಎಂದು ತೋರಿಸಲು ದಾಖಲಾತಿ ಇದೆಯಾ ಎಂದರೆ ಸಾಕ್ಷಿಯು ನಮ್ಮ ಯಾವುದೇ ದಾಖಲಾತಿಗಳಲ್ಲಿ ವಾದಿಯ ತಂದೆಯ ಹೆಸರು ನಮೂದು ಇಲ್ಲ ಎಂದು ನುಡಿಯುತ್ತಾರೆ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ.ಕೇ. ಸರಿ ಇದೆ**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**

**ಪ್ರ.ದ. ನ್ಯಾ.ದಂಡಧಿಕಾರಿಗಳು, ಕುಷ್ಟಗಿ**